


ಕಟ್ಟೋಣಕ್ಕೆ ಅನಗತ್ಯವಾದ ಸಂಗತಿಗಳು, ಸನ್ನಿವೇಶಗಳು, ಘಟನೆಗಳು, ಸಂಭಾಷಣೆಗಳು ತೀರಾ ವಿರಳ ಅಥವಾ ಇಲ್ಲವೇ ಇಲ್ಲವೆಂಬಷ್ಟು ಸೂಕ್ಷ್ಮ ರಚನೆಗಳಾಗಿವೆ.

ನಾರಾಯಣರ ಹೋರಾಟದ ವ್ಯಕ್ತಿತ್ವದ ಬಗ್ಗೆ ಹೇಳದಿದ್ದರೆ ಅವರ ವ್ಯಕ್ತಿಚಿತ್ರ ಪೂರ್ಣವಾಗುವುದೇ ಇಲ್ಲ. ಕನ್ನಡದ ವಿಷಯಕ್ಕೆ ಅವರದು ಅನನ್ಯ ವೀರನಿಷ್ಠೆ ಮತ್ತು ಹುಚ್ಚು ಎನಿಸುವಷ್ಟು ಪ್ರೀತಿ. ಕನ್ನಡದ ಸ್ಥಾನಮಾನಗಳ ವಿಷಯಕ್ಕೆ ಬಂದರೆ ಅವರು ಎಂದೂ ರಾಜಿ ಮಾಡಿಕೊಳ್ಳುವವರೇ ಅಲ್ಲ. 'ಸಾಹಿತಿ ಕಲಾವಿದರ ಬಳಗ'ದ ಸಕ್ರಿಯ ಸಂಚಾಲಕರಾಗಿ ಗೋಕಾಕ್ ಚಳವಳಿ ಮೊದಲುಗೊಂಡು ಅವರು ಭಾಗವಹಿಸದಿರುವ ಹೋರಾಟವೇ ಇಲ್ಲವೆನ್ನಬಹುದು. ಶಿಕ್ಷಣ ಮಾಧ್ಯಮವಾಗಿ ಕನ್ನಡ ಪ್ರಾಥಮಿಕ ಹಂತದಿಂದಲೇ ಜಾರಿಗೆ ಬರಬೇಕೆನ್ನುವ ವಿಷಯಕ್ಕೆ ಅವರದು ಬೇರೆ ಅಭಿಪ್ರಾಯವೇ ಇಲ್ಲ. ಭಾರತದ ರಾಷ್ಟ್ರೀಯತೆಯ ಜೊತೆಗೆ ಕನ್ನಡಿಗರ ಉಪರಾಷ್ಟ್ರೀಯತೆಯೊಂದು ಅದಕ್ಕೆ ಸಮಾನವಾಗಿಯೇ ಸಾಗಬೇಕೆಂಬ ಅಭಿಪ್ರಾಯದವರು ಅವರು. ಕನ್ನಡವೇ ಅವರ ಗಾಯತ್ರಿ. ಕನ್ನಡ ಮಾಧ್ಯಮದ ವಿಷಯಕ್ಕೆ, ಆಡಳಿತ ಕನ್ನಡದ ವಿಷಯಕ್ಕೆ, ಬದ್ಧರಾಗಿ ರಾಷ್ಟ್ರಭಾಷೆ ಎಂಬ ಹೆಸರಿನಲ್ಲಿ ಕನ್ನಡದ ಮೇಲೆ ಹಿಂದಿ ಸವಾರಿ ಮಾಡುವ ವಿಷಯಕ್ಕೆ ಅವರು ಯಾವತ್ತೂ ವಿರೋಧ ತೋರುತ್ತ ಹೋರಾಟ ನಡೆಸುತ್ತ ಬಂದವರು.

ಬೆಂಗಳೂರಿನ 'ಬಿಎಂಶ್ರೀ ಪ್ರತಿಷ್ಠಾನ'ದ ಅಧ್ಯಕ್ಷರಾಗಿ ಏಳು ವರ್ಷಗಳಿಗೂ ಹೆಚ್ಚು ಕಾಲ ಅವರು ಮಾಡಿದ ಕಾರ್ಯ, ಅವರ ಬರಹದಷ್ಟೇ ಮಹತ್ವದ್ದು. ಅನೇಕ ಅರ್ಥಪೂರ್ಣ ಯೋಜನೆಗಳನ್ನು ಕಾರ್ಯಗತಗೊಳಿಸುವ ಮೂಲಕ 'ಬಿಎಂಶ್ರೀ ಪ್ರತಿಷ್ಠಾನ' ಸಾಹಿತ್ಯಿಕವಾಗಿ ಇಂದು ಮುನ್ನೆಲೆಯಲ್ಲಿದ್ದರೆ ಅದರಲ್ಲಿ ಪಿವಿಎನ್ ಅವರದು ಸಿಂಹಪಾಲು. ಗ್ರಂಥ ಪ್ರಕಾಶನ ಸಮಿತಿ ರಚಿಸಿ ಕೆಲವು ಮಹತ್ವದ ಗ್ರಂಥಗಳ ಪ್ರಕಟಣೆಯ ಯೋಜನೆ ರೂಪಿಸಿದ್ದರು. ಅವರ ಕಲ್ಪನೆಯ ಕೂಸಾದ 'ಅಕ್ಕರಗೊಟ್ಟಿ'ಯಂತೂ ತೀರಾ ಜನಪ್ರಿಯ ಕಾರ್ಯಕ್ರಮ. 'ಉದಯಭಾನು ಕಲಾಸಂಘ'ದ ಉನ್ನತ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಎರಡು ಮೂರು ವರ್ಷ ಅವರು ಮಾಡಿದ ಕೆಲಸ ಮರೆಯುವಂತೆಯೇ ಇಲ್ಲ. ಆ ಸಂಸ್ಥೆಯ ಸುವರ್ಣ ಮಹೋತ್ಸವದ ನೆನಪನ್ನು ಚಿರಸ್ಥಾಯಿಗೊಳಿಸುವ ಸಲುವಾಗಿ ಆ ಸಂಸ್ಥೆ ಕೈಗೊಂಡಿರುವ 'ಉದಯಭಾನು ಸುವರ್ಣ ಪುಸ್ತಕಮಾಲೆ' ಯೋಜನೆಯ ಸಂಪಾದಕರಾಗಿದ್ದುಕೊಂಡು ಐವತ್ತು ಮಂದಿ ಸಮಕಾಲೀನ ಸಾಧಕರ ಬದುಕು ಮತ್ತು ಕೊಡುಗೆಗಳ ಕುರಿತಂತೆ ಕಿರುಹೊತ್ತಗೆಗಳನ್ನು ಪ್ರಕಟಿಸುವ ಕೆಲಸವನ್ನೂ ರೂಪಿಸಿದ್ದರು.

ಈಗ್ಗೆ ಎರಡು ವರ್ಷಗಳ ಹಿಂದೆ ಅಭಿನಂದನಾ ಗ್ರಂಥ ಸಲ್ಲಿಸಬೇಕೆಂಬ ಅಭಿಮಾನಿಗಳ ಇಚ್ಛೆಯನ್ನು ಈಡೇರಿಸಲು ಪಿವಿಎನ್ ಅವರನ್ನು ಕಷ್ಟದಿಂದ ಒಪ್ಪಿಸಲಾಯಿತು. ಬದುಕಿದ್ದಷ್ಟು ಕಾಲವೂ ನಿರಂತರ ಅಧ್ಯಯನ, ಅಧ್ಯಾಪನ, ಬರವಣಿಗೆ, ಭಾಷಣ, ಹೋರಾಟ, ಸಂಘ ಸಂಸ್ಥೆಗಳಲ್ಲಿ ಅತ್ಯಂತ ರಚನಾತ್ಮಕವಾಗಿ ತೊಡಗಿಸಿಕೊಳ್ಳುವುದೇ ಮೊದಲಾದ ಕನ್ನಡವನ್ನು ಕಟ್ಟುವ ನಾನಾ ಬಗೆಯ ಕಾಯಕದಲ್ಲಿ ಸದ್ದುಗದ್ದಲವಿಲ್ಲದೆ ಸಾರ್ಥಕವಾಗಿ ಸಕ್ರಿಯರಾಗಿದ್ದ ಈ ಹಿರಿಯರು ಇದೀಗ ಚಿರನಿದ್ರೆಗೆ (ಏಪ್ರಿಲ್ 3, 2025) ಸಂದಿದ್ದಾರೆ, ಅವರ ಸಾಧನೆ ಮತ್ತು ವ್ಯಕ್ತಿತ್ವ ಎರಡೂ ಅನನ್ಯವಾದವು.

●